ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 204/2017

(ಫ್ರಾಸಾ-9 ಚಾಸಾ-6 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 18.12.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಎಸ್. ಪಿ. ಕೆಂಚಎಲ್ಲಪ್ಪ |
| ತಂದೆಯ ಹೆಸರು | - | ಪುಟ್ಟಲಕ್ಕಯ್ಯ |
| ವಯಸ್ಸು | - | 52 ವರ್ಷ, |
| ಉದ್ಯೋಗ | - | ವ್ಯವಸಾಯ |
| ವಾಸ | - | ಶ್ರೀರಾಮನಹಳ್ಳಿ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಸದರಿ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ನಿಶಾನೆ ಪಿ-2 ಪಂಚನಾಮೆ ಇದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-2(ಸಿ) ಎಂದು ಗುರುತಿಸಲಾಯಿತು. ಈಗ 9 ವರ್ಷಗಳ ಹಿಂದೆ ನಾನು ರಾಜಾನುಕುಂಟೆ ಪೋಲಿಸ್ ಠಾಣೆಗೆ ಹೋಗಿದ್ದಾಗ ನಿಪಿ-2 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ನಿಶಾನೆ ಪಿ-2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2. ದಿಃ25.07.2016 ರಂದು ಪೋಲಿಸರು ಗಲಾಟೆ ನಡೆದ ಸ್ಥಳವಾದ ಗೃಹಲಕ್ಷ್ಮಿ ಹೌಸಿಂಗ್ ಸೊಸೈಟಿ, ಶ್ರೀರಾಮನಹಳ್ಳಿ ಸರ್ವೆ ನಂಬರ್ 45/2 ರಲ್ಲಿ ಚಾಸಾ-4 ರವರು ಸ್ಥಳ ತೋರಿಸಿದ ಮೇರೆಗೆ ನಿಶಾನೆ ಪಿ-2 ರಂತೆ ಸ್ಥಳ ಪಂಚನಾಮೆಯನ್ನು ಮಾಡಿ ಚಾಸಾ-

4 ರವರು ಹಾಜರುಪಡಿಸಿದ ಮು.ಮಾ-1 ರಿಂದ 3 ದೊಣ್ಣೆಗಳನ್ನು ನನ್ನ ಹಾಗೂ ಚಾಸಾ-4 ಮತ್ತು 7 ರವರ ಸಮಕ್ಷಮ ಅಮಾನತುಪಡಿಸಿಕೊಂಡು ಸಂಜೆ 4 ರಿಂದ 5 ಘಂಟೆಗೆ ಪಂಚನಾಮೆ ಜರುಗಿಸಿ ಅದರಲ್ಲಿ ಬರೆದಿರುವ ವಿಷಯಗಳನ್ನು ನಮಗೆ ಓದಿ ಹೇಳಿದಾಗ ನಾವು ಅದರಲ್ಲಿ ಬರೆದಿರುವುದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-2 ರಂತೆ ನನ್ನ ಸಮಕ್ಷಮ ಪಂಚನಾಮೆ ಜರುಗಿಸಿದ್ದರೂ ಸಹ ಆರೋಪಿತರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಎಸ್ ಬಿ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು